ಓ:ಎಸ್:ನಂ.346/2015

ಪಿ.ಡಬ್ಲ್ಯೂ- 1

***<u>ದಿಃ 23-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>***

***<u>ಪಾಟೀ ಸವಾಲುಃ 2 ರಿಂದ 4ನೇ ಪ್ರತಿವಾದಿಗಳ ಪರ ಶ್ರೀ ಡಿ ಸಿ ಎಸ್ ವಕೀಲರಿಂದ</u>***

(ಮಧ್ಯಂತರ ಅರ್ಜಿಗಳ ಆದೇಶದ ಮೇರೆಗೆ)

ದಾವ ಸ್ವತ್ತು ತರೀಕೆರೆಯಿಂದ ಅಜ್ಜಂಪುರಕ್ಕೆ ಹೋಗುವ ರಸ್ತೆಯ ಉತ್ತರ ಭಾಗದಲ್ಲಿದೆ ಎಂದರೆ ಸರಿ. ದಾವ ಸ್ವತ್ತು ಸೊಕ್ಕೆ ಗ್ರಾಮದ ಪಶ್ಚಿಮ ಭಾಗದಲ್ಲಿದೆ ಎಂದರೆ ಸರಿ. ಲೇಔಟ್ ನಲ್ಲಿ ಪೂರ್ವದಿಂದ ಪಶ್ಚಿಮದ ಕಡೆಗೆ ನಿವೇಶನದಲ್ಲಿ ನಿವೇಶನ ಸಂಖ್ಯೆ. 1, 2 ಮತ್ತು 3 ಎಂದು ನಮೂದಾಗಿದೆ ಎಂದರೆ ಸರಿ. ದಾವ ಸ್ವತ್ತು 6 ನಿವೇಶನದ ನಂತರ ಪೂರ್ವ ದಿಕ್ಕಿಗೆ ದಾವ ಸ್ವತ್ತು ಇದೆ ಎಂದರೆ ಈಗ ನನಗೆ ಗೊತ್ತಿಲ್ಲ. ದಾವ ಸ್ವತ್ತಿಗೆ ಸಂಬಂಧಪಟ್ಟಂತೆ ಲೇಔಟ್ ಪ್ಲಾನ್ ನ್ನು ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಲೇಔಟ್ ನಲ್ಲಿ ರಸ್ತೆ ನಮೂದಾಗಿಲ್ಲ ಮತ್ತು ಯಾವುದೇ ನಿವೇಶನಗಳ ಬಗ್ಗೆ ನಮೂದಾಗಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ದಾವ ಸ್ವತ್ತಿನ ಸ್ವಾಧೀನವನ್ನು ನನಗೆ ಕೊಟ್ಟಿರುವುದಿಲ್ಲ, ನಾನು ಮೋಸದಿಂದ ಮನೆಯನ್ನು ಕಟ್ಟಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಲೇಔಟ್ ಪ್ಲಾನ್ ನ್ನು ನೋಡಿರುವುದಿಲ್ಲ. ನನಗೆ ಮಂಜೂರಾಗಿರುವ ಸ್ಥಳದಲ್ಲಿ ನಾನು ಮನೆಯನ್ನು ನಿರ್ಮಾಣ ಮಾಡಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಪೂರ್ವದ ಕಡೆ 6 ನಂಬರಿನ ನಿವೇಶನ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವ ಸ್ವತ್ತಿನ ಪಶ್ಚಿಮಕ್ಕೆ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

***(ತಿರಿದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

ಓ. ಕೇ. ಸ. ಇ. ಎ. ಒ.

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**